ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

UGC ಮಾರ್ಗ ಸೂಚಿಯಂತೆ AGP-9000 ಹುದ್ದೆ ಪದೋನ್ನತಿ ಹಾಗೂ FDP ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

930 (1206) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಿನಾಂಕ:11-07-2016ರ ಯು.ಜಿ.ಸಿ. ಮಾರ್ಗಸೂಚಿಯಂತೆ ಯು.ಜಿ.ಸಿ. ಪ್ರಾಯೋಜಕತ್ವದಲ್ಲಿ ಮತ್ತು ಕಾಲೇಜು ಶಿಕ್ಷಣ ವತಿಯಿಂದ ಗೊತ್ತುಪಡಿಸಿರುವ ಅನುಮೋದಿತ ಶಿಬಿರ/ಕಾರ್ಯಾಗಾರ/ತರಬೇತಿಗಳು ಮತ್ತು ತರಬೇತಿ ಸಂಸ್ಥೆಗಳ ವಿವರಗಳನ್ನು ಒದಗಿಸುವುದು;

(ಆ)AICTEಪ್ರಾಯೋಜಿತ Engineering ಶಿಕ್ಷಣ ಸಂಸ್ಥೆಗಳಲ್ಲಿ ಕೈಗೊಳ್ಳುವ 7 ಅಥವಾ ಹೆಚ್ಚಿನ ದಿನಗಳು ನಡೆಸಲ್ಪಡುವ FDP ತರಬೇತಿಗಳು ದಿನಾಂಕ: 11-07-2016 ಯು.ಜಿ.ಸಿ. ಮಾರ್ಗಸೂಚಿಯನ್ವಯ ತರಬೇತಿಯನ್ನು ನೀಡಲು ಅರ್ಹತೆ ಪಡೆದಿರುವ/ಪಡೆಯದಿರುವ ಆದೇಶಗಳನ್ನು ಒದಗಿಸುವುದು ;

(ಇ) ಎಜಿಪಿ-9000 ವೃತ್ತಿ ಪದೋನ್ನತ್ತಿ ನೀಡಲು ದಿನಾಂಕ:10-10-2018ರಂದು ನಡೆದ ಪರಿಶೀಲನಾ ಸಮಿತಿಯ ಮುಂದೆ ಹಾಜರಾಗಿದ್ದ ಸಹಾಯಕ ಪ್ರಾಧ್ಯಾಪಕರುಗಳಲ್ಲಿ ತಿರಸ್ಕೃತಗೊಂಡಿರುವವರ ಬಗ್ಗೆ

ಮಾಹಿತಿಯನ್ನು ಒದಗಿಸುವುದು ;

(ಈ) ಸದರಿ ತಿರಸ್ಕøತಗೊಂಡ ಸಹಾಯಕ ಪ್ರಾಧ್ಯಾಪಕರುಗಳು ಹಾಜರುಪಡಿಸಿದ್ದ FDP ತರಬೇತಿ ಪ್ರಮಾಣ ಪತ್ರಗಳು, ಮುತ್ತಿತ್ತರಕೋರ್ಸ್ ದಾಖಲೆಗಳನ್ನು ಪರಿಗಣಿಸುವ ಅಥವಾ ಪರಿಗಣಿಸದಿರುವ ಬಗ್ಗೆ ಯು.ಜಿ.ಸಿ.ಯಿಂದ ಪಡೆಯಲಾದ ಸ್ಪಷ್ಟೀಕರಣದ ಬಗ್ಗೆ ವಿವರಗಳನ್ನು ಒದಗಿಸುವುದು ;

(ಉ) ಎಜಿಪಿ-9000 ವೃತ್ತಿ ಪದೋನ್ನತಿ ನೀಡಲು ದಿನಾಂಕ:10-10-2018ರಂದು ನಡೆದ ಪರಿಶೀಲನಾ ಸಮಿತಿಯ ಮುಂದೆ ಹಾಜರಾಗಿದ್ದ ಸಹಾಯಕ ಪ್ರಾಧ್ಯಾಪಕರುಗಳು ಪ್ರಸ್ತಾವನೆಗಳನ್ನು ಸಲ್ಲಿಸುವ ಮುನ್ನ ಇಂತಹದ್ದೇ ರಿಫ್ರೆಶರ್ ಕೋರ್ಸ್, ಕಿರು ಅವಧಿಯ ಕೋರ್ಸ್‌ಗಳು ಮತ್ತು FDP ತರಬೇತಿಗಳ ಬಗ್ಗೆ ಇಲಾಖೆಯು ನಿರ್ಧಿಷ್ಟವಾಗಿ ಹೊರಡಿಸಿರುವ ಸುತ್ತೋಲೆಗಳನ್ನು ಒದಗಿಸುವುದು